ಮೇಲ್ ಬಾಕ್ಸ್ ಕ್ಲಬ್ ಪ್ರಸ್ತುತ ಪಡಿಸುವ...



# ಅನ್ವೇಷಕರು ಕ್ಲಬ್

ಹೆಸರು

______________________________



ಅನ್ವೇಷಕರು 1

# ವಿಷಯಾನುಕ್ರಮಣಿಕೆ

## ಪಾಠಗಳು


1 ದೇವರು ಯಾವರೀತಿಇದ್ದಾನೆ (ಭಾಗ 1)

2 ದೇವರು ಯಾವರೀತಿಇದ್ದಾನೆ (ಭಾಗ 2)

3 ನಾವು ಎಲ್ಲಿಂದ ಬಂದಿದ್ದೇವೆ?

4 ನಮ್ಮ ವೈರಿಯು ಯಾರು?

5 ವಾಗ್ದಾನದ ರಕ್ಷಕನು ಯಾರು?

6 ಯೇಸು ಈಗಲೂ ಜೀವಿಸುತ್ತಿದ್ದಾನೆ!

7 ನಾಲ್ಕು ಪ್ರಶ್ನೆಗಳು

8 ನಾನು ದೇವರ ಮಗುವಾಗಲು ಸಾಧ್ಯವಿದೆ!

9 ಯೇಸು ತಿರುಗಿ ಬರುತ್ತಾನೆ!

10 4 ಸಂಗತಿಗಳನ್ನು ನಾನು ತಿಳಿದುಕೊಳ್ಳಲು...
ದೇವರು ಅಪೇಕ್ಷಿಸುತ್ತಾನೆ

11 ಕ್ರಿಸ್ತನಲ್ಲಿ ಒಬ್ಬ ನೂತನ ವ್ಯಕಿ

12 ದೇವರ ಮಹಾಶ್ರೇಷ್ಠವಾದ ಉಡುಗೊರೆ



**EXPLORERS 1 WORKBOOK:** ISBN 978-1-59480-593-6 www.mailboxclub.org


*NOTE: The King James Version is used in all Mailbox Club courses. We reserve the right to translate from the original texts where necessary to make the meaning clear to the reader.*


*Copyright © 2011 Explorers 1 The Mailbox Club International Illustrations by Stephen Bates*


ಪಾಠ 1

# ದೇವರು ಯಾವರೀತಿಇದ್ದಾನೆ (ಭಾಗ 1)

**ಪ್ರಿಯ ಸ್ನೇಹಿತನೇ,**

ನೀನು ಎಂದಾದರೂ ದೇವರು ಹೇಗೆ ಇದ್ದಾನೆಂಬದನ್ನು ಕುರಿತು ಆಶ್ಚರ್ಯಪಟ್ಟಿ ದ್ದೀಯಾ? ದೇವರು ಎಷ್ಟು ಉನ್ನತನು ಮತ್ತು ಅದ್ಭುತಸ್ವರೂಪನೂ, ,ಆತನ ಬಗ್ಗೆ ಎಲ್ಲವನ್ನು ತಿಳಿಯುವುದು ಅಸಾಧ್ಯ, ಆದರೆ ದೇವರು ನಮಗೆ ಒಂದು ಆಶ್ಚರ್ಯಕರವಾದ ಪ್ರಸ್ತಕವನ್ನು ಕೊಟ್ಟಿ ದ್ದಾನೆ, ಆದು ಆತನ ಬಗ್ಗೆ ನಮಗೆ ತಿಳಿಸುವುದು.

**ಈ ಪುಸ್ತಕವು ಯಾವುದು?** ಅದು ಸತ್ಯವೇದ, ದೇವರ ವಾಕ್ಯ, ಸತ್ಯವೇದವು ದೇವರು ಎಲ್ಲವನ್ನು ಸೃಷ್ಟಿಸಿದ್ದಾನೆಂದು ನಮಗೆ ತಿಳಿಸುತ್ತದೆ. ದೇವರು ಸೂರ್ಯನನ್ನು ಮತ್ತು ಚಂದ್ರನನ್ನು ಉಂಟುಮಾಡಿ ದ್ದಾನೆ, ಆತನು ಮಿಲಿಯಗಟ್ಟಲೆ ಮಿನುಗುವ ನಕ್ಷತ್ರ ಗಳನ್ನು ಆಕಾಶದಲ್ಲಿ ಉಂಟುಮಾಡಿದ್ದಾನೆ. ದೇವರು ಭೂಮಿಯನ್ನು ಉಂಟುಮಾಡಿದ್ದಾನೆ. ದೇವರು ಪಕ್ಷಿಗಳನ್ನು, ಮೀನುಗಳನ್ನು ಮತ್ತು ಪ್ರಾಣಿಗಳನ್ನು ಉಂಟುಮಾಡಿದನು. ನಂತರ ದೇವರು ಮೊದಲನೆಯ ಮನುಷ್ಯರನ್ನು ಗಂಡು, ಹೆಣ್ಣಾಗಿ ಸೃಷ್ಟಿಸಿದನು.



**ದೇವರು ನಮ್ಮನ್ನು ಯಾತಕ್ಕಾಗಿ ಸೃಷ್ಟಿಸಿದನು?** ನಾವು ದೇವರನ್ನು ಪ್ರೀತಿಸಲೂ ಮತ್ತು ದೇವರಿಂದ ಪ್ರೀತಿ ಹೊಂದುವದಕ್ಕಾಗಿ ದೇವರು ನಮ್ಮನ್ನು ಸೃಷ್ಟಿಸಿ ದನು. ದೇವರು ಪ್ರತೀಯೊಬ್ಬರನ್ನೂ ತಿಳಿದಿದ್ದಾನೆ ಮತ್ತು ಪ್ರೀತಿಸುತ್ತಾನೆ.

ದೇವರಿಗೆ ಬಹಳ ಸಂತೋಷಪಡಿಸುವಂತಾದ್ದು ಯಾವದೆಂದರೆ ನಾವು ದೇವರನ್ನು ಕಂಡುಕೊಂಡು ಆತನನ್ನು ಪ್ರೀತಿಸುವುದು. ನಾವು ಮಾಡುವ ಎಲ್ಲಾ ಕಾರ್ಯಗಳಲ್ಲಿ ಅತೀ ಉತ್ತಮವಾದದ್ದು, ದೇವರನ್ನು ತಿಳಿದುಕೊಂಡು ಆತನನ್ನು ಪ್ರೀತಿಸುವುದು ಮತ್ತು ಅದು ನಿಜವಾಗಿಯು ನಮ್ಮನ್ನು ಸಂತೋಷಗೊಳಿಸುತ್ತದೆ.

**ಈ ಅಧ್ಯಾಯದಲ್ಲಿ** ನಮಗೆ ಸತ್ಯವೇದವು ದೇವರ ಬಗ್ಗೆ ಏನು ಹೇಳುತ್ತದೆ ಎಂದು ನೋಡೋಣ. ನಮ್ಮನ್ನು ಹೆಚ್ಚಾಗಿ ಪ್ರೀತಿಸುವ, ನಮ್ಮ ಅದ್ಭುತನಾದ ದೇವರ ಕುರಿತು ಐದು ಮುಖ್ಯ ಸಂಗತಿಗಳನ್ನು ಕಲಿಯುತ್ತೇವೆ.

## ದೇವರು ಒಬ್ಬ ವ್ಯಕ್ತಿ

**ದೇವರು ಒಬ್ಬನೇ –** ನಿಜವಾದ ಮತ್ತು ಜೀವ ಸ್ವರೂಪನಾದ ದೇವರು. “ಆತನು ಹೇಳಿದ್ದೇನೆಂದರೆ ನಾನೇ ದೇವರು ನನ್ನ ಹೊರತು ಬೇರೆ ದೇವರುಗಳಿಲ್ಲ...” (ಯೆಶಾಯ 45:5)

ದೇವರು ಒಂದು “ಸೈನ್ಯವಲ್ಲ” ದೇವರು ಜೀವಸ್ವರೂಪನಾದ ವ್ಯಕ್ತಿ, ಆತನು ನಮ್ಮಲ್ಲಿ ಒಬ್ಬೊಬ್ಬರನ್ನು ತಿಳಿದಿದ್ದಾನೆ ಮತ್ತು ಪ್ರೀತಿಸುತ್ತಾನೆ. ನಾವು ಆತನನ್ನು ತಿಳುಕೊಂಡಾಗ ಆತನು ಸಂತೋಷಪಡುತ್ತಾನೆ. ಎಲ್ಲಾದಕ್ಕಿಂತಲೂ ಹೆಚ್ಚಾಗಿ ನಾವು ಪೂರ್ಣ ಹೃದಯದಿಂದ ಆತನನ್ನು ಪ್ರೀತಿಸಬೇಕೆಂದು ಆತನು ಬಯಸುತ್ತಾನೆ.

## ದೇವರು ಆತ್ಮಸ್ವರೂಪನು

**ದೇವರು ವ್ಯಕ್ತಿಯಾಗಿದ್ದರೂ ನಮಗಿದ್ದಂತೆಯೇ ಆತನಿಗೆ ಶರೀರವಿಲ್ಲ.** ದೇವರು ಆತ್ಮಸ್ವರೂಪಿ. ಆತ್ಮ ನನ್ನು ನೋಡಲು ನಮಗೆ ಸಾಧ್ಯವಿಲ್ಲ. ದೇವರು ನಿನ್ನನ್ನು ಸೃಷ್ಟಿಸಿದಾಗ ನಿನಗೆ ಒಂದು ದೇಹವನ್ನು ಕೊಟ್ಟಿದ್ದಾನೆ, ಮತ್ತು ನಿನಗೆ ಆತ್ಮವನ್ನು ಕೊಟ್ಟಿದ್ದಾನೆ. ಆತ್ಮವು ನಿನ್ನ ದೇಹದಲ್ಲಿ ವಾಸಿಸುತ್ತದೆ, ಇತರರು ನಿನ್ನ ದೇಹವನ್ನು ನೋಡುವರು ಆದರೆ ನಿನ್ನ ಆತ್ಮವನ್ನು ಕಾಣಲಾರರು.

**ದೇವರು ಪೂರ್ತಿ ಆತ್ಮಸ್ವರೂಪನಾಗಿದ್ದಾನೆ.** ಆದುದರಿಂದ ನಮಗೆ ಆತನನ್ನು ನೋಡಲು ಸಾಧ್ಯವಿಲ್ಲ. ದೇವರು ಆತನಿಗೆ ಪ್ರತಿಯಾಗಿ ಯಾವ ಮೂರ್ತಿಯನ್ನೂ ಮಾಡಬಾರದು ಮತ್ತು ಯಾವ ಮೂರ್ತಿಯನ್ನೂ ಪೂಜಿಸಲೂಬಾರದು. ಸತ್ಯವೇದವು ಯೋಹಾನ ೪:೨೪ ರಲ್ಲಿ “ದೇವರು ಆತ್ಮಸ್ವರೂಪನೂ: ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ, ಆರಾಧಿಸಬೇಕು” ಎಂದು ತಿಳಿಸುತ್ತದೆ.

ನಾವು ದೇವರನ್ನು ನೋಡಲು ಅಸಾಧ್ಯವಾದರೂ ಆತನು ನಿಜವಾದ ಮತ್ತು ಜೀವಿಸುವ ದೇವರಾಗಿ ದ್ದಾನೆ. ನಾವು ದೇವರನ್ನು ತಿಳಿಯಬೇಕೆಂದು ಆತನು ಅಪೇಕ್ಷಿಸುತ್ತಾನೆ. ನಾವು ಆತನನ್ನು ತಿಳಿದಾಗ ಆತನನ್ನು ಪ್ರೀತಿಸುತ್ತೇವೆ ಮತ್ತು ದೇವರನ್ನು ಪ್ರೀತಿಸಿದಾಗ ನಮಗೆ ಆತನಲ್ಲಿ ಭರವಸೆಯಿಡಲು ಸಾಧ್ಯವಾಗುತ್ತದೆ.

## ದೇವರು ತೇಜೋಮಯನು

ದೇವರ ಮಹಿಮೆಯು ಎಷ್ಟೋ ಪ್ರಕಾಶವಾದದು ಆದುದರಿಂದ ನಾವು ಆತನನ್ನು ನೋಡಲು ಸಾಧ್ಯವಿಲ್ಲ. ಸೂರ್ಯನ ಪ್ರಕಾಶವಾದ ಕಿರಣಗಳನ್ನು ನಾವು ನೋಡಲು ಸಾದ್ಯವಿಲ್ಲ, ನೋಡಿದರೆ ನಮ್ಮ ದೃಷ್ಟಿಗೆ ಕೆಡುಕಾಗುವದು ಮತ್ತು ಹೆಚ್ಚುಕಾಲ ದೃಷ್ಟಿಸಿದರೆ ನಾವು ನಮ್ಮ ದೃಷ್ಟಿಯನ್ನೇ ಕಳಕೊಳ್ಳುವೆವು.

**ದೇವರ ಮಹಿಮೆಯು ಸೂರ್ಯನ ಪ್ರಕಾಶಕ್ಕಿಂತಲೂ ಎಷ್ಟೋ ಅಧಿಕವಾದದ್ದು.** ಈ ಕಾರಣದಿಂದ ನಮಗೆ ದೇವರನ್ನು ನೋಡಲು ಸಾಧ್ಯವಿಲ್ಲ, ದೇವರು ಹೇಳುತ್ತಾನೆ “ಮನುಷ್ಯರಲ್ಲಿ ನನ್ನನ್ನು ನೋಡಿ ಯಾರೂ ಜೀವಿಸಲಾರರು” (ವಿಮೋಚನಕಾಂಡ 33:20).

**ಸತ್ಯವೇದವು ಮೋಶೆ ಎಂಬಾತನ ಕುರಿತು ನಮಗೆ ಹೇಳುತ್ತದೆ** ಮೋಶೆಯು ದೇವರಿಗೆ ಅತೀ ಪ್ರಿಯನಾದ ಸ್ನೇಹಿತನಾಗಿದ್ದನು. ಆತನು ದೇವರೊಡನೆ ಮಾತಾಡಿದನು, ಮತ್ತು ದೇವರು ಸಹ ಹಲವು ಸಾರಿ ಆತನ ಸಂಗಡ ಮಾತಾಡಿ ದ್ದಾನೆ. ಆದರೆ ಮೋಶೆಯು ದೇವರನ್ನು ನೋಡಲೇ ಇಲ್ಲ.



# ದೇವರು ಪರಿಶುದ್ಧನೂ

ಒಂದು ದಿವಸ ಮೋಶೆಯು ದೇವರೊಂದಿಗೆ ಒಂದು ವಿಶೇಷ ಸಹಾಯವನ್ನು ಕೋರಿದನು. ಅವನು ಹೀಗೆ ಹೇಳಿದನು "ದಯಮಾಡಿ ನಿನ್ನ ಮಹಿಮೆಯನ್ನು ತೋರಿಸು," (ವಿಮೋಚನ ಕಾಂಡ 33:18).

**ದೇವರು ಮೋಶೆಗೆ ಹೇಳಿದನು** "ನೀನು ನನ್ನ ಮುಖವನ್ನು ನೋಡಲಾರಿ, ಯಾಕೆಂದರೆ ಯಾವ ಮನುಷ್ಯನೂ ನನ್ನನ್ನು ನೋಡಿ ಜೀವಿಸಲಾರನು, ಆದರೆ ನಿನ್ನನ್ನು ಬಂಡೆಯ ನಡುವೆ ಇರಿಸಿ, ನಂತರ ನಾನು ನಿನ್ನನ್ನು ಹಾದು ಹೋಗುತ್ತೇನೆ."

**ಮೋಶೆಯು ಒಬ್ಬನೇ ಬೆಟ್ಟವನ್ನೇರಿ ಹೋದನು,** ದೇವರು ಬಂಡೆಯ ನಡುವೆ ಅವನನ್ನು ಇರಿಸಿದನು, ಮತ್ತು ದೇವರ ಪ್ರಭಾವವು ಮೋಶೆಯನ್ನು ದಾಟಿ ಮುಂದೆ ಹೋಯಿತು, ಮೋಶೆಯು ದೇವರನ್ನು ನೋಡಲಿಲ್ಲ ಆದರೆ ಸ್ವಲ್ಪ ಮಾತ್ರವೇ ಆತನ ಪ್ರಭಾವದ ಮಹಿಮೆಯನ್ನು ಕಂಡನು, ಆದ್ದರಿಂದ ಅವನ ಮುಖವು ಸೂರ್ಯನಂತೆ ಪ್ರಕಾಶದಿಂದ ಹೊಳೆಯಿತು.

**ಮೋಶೆ ಬೆಟ್ಟದಿಂದಿಳಿದು ಬಂದಾಗ,** ಆತನ ಮುಖವು ಎಷ್ಟು ಪ್ರಕಾಶವಾಗಿತ್ತೆಂದರೆ ಜನರು ಅವನನ್ನು ನೋಡಿ ಭಯ ಪಟ್ಟರು. ಆಗೆ ಮೋಶೆ ಮತ್ತು ಜನರು ಆಶ್ಚರ್ಯವಾಗಿ ಹೇಳಿ ದ್ದೇನೆಂದರೆ, ವಿಮೋಚನಕಾಂಡ 15:11, "ಯೆಹೋವನೇ, ದೇವರುಗಳಲ್ಲಿ ನಿನಗೆ ಸಮಾನನು ಯಾವನು, ಪರಿಶುದ್ಧತ್ವದಿಂದ ಸರ್ವೋತ್ತಮನೂ, ಪ್ರಖ್ಯಾತ ಕೃತ್ಯಗಳನ್ನು

ಮಾಡಿರುವುದರಿಂದ ಭಯಂಕರನೂ, ಅದ್ಭುತ ಗಳನ್ನು ನಡಿಸುವವನೂ ಆಗಿರುವ ನಿನಗೆ ಸಮಾನರು ಯಾರು?"

ಇದರ ಅರ್ಥ ದೇವರು ಶುದ್ಧನೂ, ಪರಿಪೂರ್ಣನೂ ಮತ್ತು ಯಾವ ಪಾಪವೂ ಇಲ್ಲದವನಾಗಿದ್ದಾನೆ. ಸತ್ಯವೇದದಲ್ಲಿ ಪಾಪವನ್ನು ಕತ್ತಲೆಗೆ ಹೋಲಿಸಿದ್ದಾರೆ, ಸತ್ಯವೇದವು ತಿಳಿಸುತ್ತದೆ, ದೇವರು ಬೆಳಕಾಗಿದ್ದಾನೆ ಮತ್ತು ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆಯಿಲ್ಲ, (1 ಯೋಹಾನ 1:5)

ದೇವರು ಬೆಳಕು ಮತ್ತು ಮಹಿಮೆಯುಳ್ಳವನು. ದೇವರು ಪರಿಶುದ್ಧನು, ದೇವರು ಎಂದೂ ಪಾಪ ಮಾಡುವುದಿಲ್ಲ, ದೇವರು ಯಾವಾಗಲೂ ಒಳ್ಳೆಯದನ್ನೇ ಮತ್ತು ಸರಿಯಾದದ್ದನ್ನೇ ಮಾಡುತ್ತಾನೆ. ದೇವರ ಮುಂದೆ ಪಾಪದಿಂದ ತುಂಬಿದ ಯಾವ ವಿಷಯವೂ ಬರಲು ಸಾಧ್ಯವಿಲ್ಲ, ಸತ್ಯವೇದ ಹೇಳುತ್ತದೆ, "ನಮ್ಮ ಕರ್ತನಾದ ದೇವರು ಪರಿಶುದ್ಧನು" (ಕೀರ್ತನೆ 99:9).

ಯೆಶಾಯ ಎಂಬ ಪ್ರವಾದಿಯೊಡನೆ ದೇವರು ಒಂದು ಸಲ ದರ್ಶನದೊಡನೆ ಮಾತಾಡಿದನು. ದರ್ಶನವೇನೆಂದರೆ, ಒಂದು ಕನಸಿನ ರೀತಿ. ಯೆಶಾಯನು ಆ ಕನಸಿನ ದರ್ಶನದಲ್ಲಿ ದೇವರನ್ನು ಆತನ ಸಿಂಹಾಸನದಲ್ಲಿ ಕೂತಿರುವುದನ್ನು ಕಂಡನು, ಆತನ ಸಿಂಹಾಸನದ ಸುತ್ತಲು ಬಹಳ ದೇವದೂತರುಗಳು ದೇವರನ್ನು ಸ್ತುತಿಸುತ್ತಾ ಹೀಗೆ ಹೇಳುತ್ತಿದ್ದರು.

"ಸೇನಾಧೀಶ್ವರನಾದ ಯೆಹೋವನು ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನು; ಭೂಮಂಡಲವೆಲ್ಲಾ ಆತನ ಪ್ರಭಾವದಿಂದ ತುಂಬಿದೆ" (ಯೇಶಾಯ 6:3).

ಯೆಶಾಯನು ಈ ಕನಸಿನ ದರ್ಶನವನ್ನು ನೋಡಿದಾಗ ಬಹಳ ಭಯಗೊಂಡನು, ಇದರಿಂದ ತಾನು ಪಾಪಿಯು, ದೇವರು ಎಷ್ಟು ಪರಿಶುದ್ಧನಾಗಿದ್ದಾನೆ ಎಂಬುದನ್ನು ತಿಳಿದುಕೊಂಡನು.



# ಪರಿಶುದ್ಧ ದೇವರು



## ದೇವರು ಪ್ರೀತಿಸ್ವರೂಪನು

ಇದರ ಅರ್ಥ, ದೇವರು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ನಮಗೆ ಉತ್ತಮವಾದದ್ದನ್ನೇ ಮಾಡುವವನಾಗಿದ್ದಾನೆ. ದೇವರು ನಮ್ಮನ್ನು ಪ್ರೀತಿಸುತ್ತಾನೆಂದು ನಾವು ಹೇಗೆ ಬಲ್ಲೆವು? ನಮಗೆ ಎರಡು ಮಾರ್ಗಗಳು ತಿಳಿದಿವೆ:

- ದೇವರು ಅದನ್ನು ನಮಗೆ ಹೇಳಿದ್ದಾನೆ, ದೇವರು ಆತನ ವಾಕ್ಯದ ಮೂಲಕ ತಿಳಿಸುವುದೇ ನಂದರೆ "ನಾನು ನಿನ್ನನ್ನು ಪ್ರೀತಿಸುವುದು ಶಾಶ್ವತ ಪ್ರೇಮದಿಂದಲೇ; ಆದಕಾರಣ ನಿನ್ನನ್ನು ಮಮತೆಯಿಂದ ಸೆಳೆದುಕೊಂಡಿದ್ದೇನೆ." (ಯೆರಮೀಯ 31:3).
- ದೇವರು ತನ್ನ ಶ್ರೇಷ್ಟ್ರ ಪ್ರೀತಿಯನ್ನು ತೋರಿಸಿ ತನ್ನ ಒಬ್ಬನೇ ಮಗನನ್ನು ನಮ್ಮ ಪಾಪಗಳಿ ಗಾಗಿ ಬಲಿಯಾಗಲು ಈ ಲೋಕಕ್ಕೆ ಕಳುಹಿಸಿಕೊಟ್ಟನು.

ದೇವರು ತೋರಿಸಿದ ಅತೀ ದೊಡ್ಡ ಪ್ರೀತಿಯೆಂದರೆ, ತನ್ನ ಒಬ್ಬನೇ ಮಗನಾದ ಯೇಸು ಕ್ರಿಸ್ತನನ್ನು ನಮ್ಮ ಪಾಪಗಳಿಗಾಗಿ ಕ್ರೂಜೆಯ ಮೇಲೆ ಸಾಯುವುದಕ್ಕೆ ಕಳುಹಿಸಿಕೊಟ್ಟನು–ನಾವು ಹೇಳಿದ ಮತ್ತು ಮಾಡಿದ ಕೆಟ್ಟ ವಿಷಯಗಳಿಗಾಗಿ ಆತನನ್ನು ಕೊಟ್ಟನು. ಸತ್ಯವೇದವು ತಿಳಿಸುತ್ತದೆ, "ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತ ಪಡಿಸಿದ್ದಾನೆ" ರೋಮ ೫:೮. ನೀನು ನೆನಸುತ್ತಿರಬಹುದು, "ನಾನು ಮಾಡಿದ ಮತ್ತು ನುಡಿದ ಕೆಟ್ಟ ವಿಷಯಗಳನ್ನು ಆತನು ತಿಳಿದಿದ್ದಾನೊ?"

ಹೌದು ದೇವರು ಎಲ್ಲವನ್ನು ತಿಳಿದಿದ್ದಾನೆ ಆದರೂ ಸಹ ಆತನು ನಿನ್ನನ್ನು ಹೃದಯ ಪೂರ್ವಕವಾಗಿ ಪ್ರೀತಿಸುತ್ತಾನೆ, ಆತನು ನಿನ್ನ ಜೀವನದ ಪ್ರತೀಯೊಂದು ಕ್ಷಣದಲ್ಲೂ ನಿನ್ನನ್ನು ಪ್ರೀತಿಸುತ್ತಾನೆ.

ಯೇಸು ಕ್ರಿಸ್ತನು ನಿಮ್ಮ ಪಾಪಗಳಿಗಾಗಿ ಸತ್ತನು, ಆದರೆ ಆತನು ಸತ್ತವನಾಗಿ ಉಳಿಯದೆ, ಮೂರನೆಯ ದಿನದಲ್ಲಿ ಜೀವಂತನಾಗಿ ಎದ್ದು ಬಂದನು, ಆತನು ನಮ್ಮ ಜೀವಿಸುವ ರಕ್ಷಕನಾಗಿದ್ದಾನೆ! ಯೇಸು ಕ್ರಿಸ್ತನು ನಿನ್ನ ಪಾಪಗಳಿಗಾಗಿ ಸತ್ತು, ತಿರುಗಿ ಜೀವಿತನಾಗಿ ಎದ್ದು ನಿನ್ನ ರಕ್ಷಕನಾಗಿದ್ದಾನೆ ಎಂದು ನಂಬ ಬೇಕೆಂದು ದೇವರು ಹೇಳುತ್ತಾನೆ. ನಿನಗೆ ತಿಳಿದಿದೆಯಾ, ದೇವರು ನಿನ್ನಿಂದ ಎಲ್ಲಾ ದಕ್ಕಿಂತ ಮಿಗಿಲಾಗಿ ಏನನ್ನು ಅಪೇಕ್ಷಿಸುತ್ತಾನೆ? ಆತನಿಗೆ ನಿನ್ನ ಪ್ರೀತಿಯು ಬೇಕು! ನೀನು ಆತನನ್ನು ಪೂರ್ಣ ಹೃದಯದಿಂದ ಪ್ರೀತಿಸಬೇಕೆಂದು ದೇವರು ಇಚ್ಛೆಸುತ್ತಾನೆ.

ನೀನು ದೇವರನ್ನು ಪೂರ್ಣ ಹೃದಯದಿಂದ ಪ್ರೀತಿಸಿದಾಗ ಆತನಿಗೆ ಸಂತೋಷವಾಗುತ್ತದೆ, ಆರಸ ನಾದ ದಾವೀದನು ಸತ್ಯವೇದದಲ್ಲಿ ಒಬ್ಬ ಪ್ರಸಿದ್ಧ ದೇವರ ಮನುಷ್ಯನಾಗಿದ್ದನು, ಅತನು ದೇವರನ್ನು ಹೆಚ್ಚಾಗಿ ಪ್ರೀತಿಸಿದನು, ಅವನು ಹೇಳಿದನು "ದೇವರೇ ನಾನು ನಿನ್ನನ್ನು ಸದಾ ಪ್ರೀತಿಸುತ್ತೇನೆ," ಇದು ದೇವರಿಗೆ ಬಹಳ ಸಂತೋಷವನ್ನುಂಟು ಮಾಡಿತು, ನೀವು ಸಹಾ ಅರಸನಾದ ದಾವೀದನಂತೆ ದೇವರನ್ನು ಪ್ರೀತಿಸಲು ಅವಲಂಭಿಸಿದರೆ ಅದು ಆತನಿಗೆ ಮತ್ತಷ್ಟು ಸಂತೋಷವನ್ನುಂಟು ಮಾಡು ತ್ತದೆ. ಈ ಪ್ರಾರ್ಥನೆಯು ನಿನಗೆ ಸಹಾಯ ಮಾಡುತ್ತದೆ:

**"ಪ್ರೀತಿಯ ದೇವರೇ, ನಾನು ಪೂರ್ಣ ಹೃದಯದಿಂದ ನಿನ್ನನ್ನು ಪ್ರೀತಿಸಲು ಮನಸ್ಸಿದೆ, ನಿನ್ನ ಕುರಿತು ಹೆಚ್ಚಾಗಿ ತಿಳಿದುಕೊಳ್ಳಲು ನನಗೆ ಸಹಾಯ ಮಾಡು, ನನ್ನನ್ನು ಪ್ರೀತಿಸಿ, ನಿನ್ನ ಮಗನನ್ನು ಈ ಲೋಕಕ್ಕೆ ಕಳುಹಿಸಿದಿ ಮತ್ತು ನನ್ನ ಪಾಪಗಳಿಗಾಗಿ ಅತನು ಕ್ರೂಜೆಯಲ್ಲಿ ಪ್ರಾಣಕೊಟ್ಟದ್ದಕ್ಕಾಗಿ ನಿನಗೆ ವಂದನೆಗಳು."**




## "ನಾನು ದೇವರವುಗುವಾಗಲು ಹೇಗೆ ಸಾಧ್ಯ"

ಒ – ಒಪ್ಪಿಕೊ ನೀನು ಪಾಪಿ ಎಂದು.

ನ – ನಂಬು ಯೇಸು ನಿನ್ನ ಪಾಪಗಳಿ ಗೋಸ್ಕರ ಪ್ರಾಣ ಕೊಟ್ಟನು.

ಬಾ– ಬಾ ಯೇಸುವಿನ ಬಳಿಗೆ, ಆತನನ್ನು ನಿನ್ನ ಸ್ವಂತ ರಕ್ಷಕನನ್ನಾಗಿ ಸ್ವೀಕರಿಸಿಕೊ.


"ಕರ್ತನಾದ ಯೇಸುವೇ ನನ್ನ ಪಾಪಗಳಿ ಗಾಗಿ ನಾನು ದುಃಖಿಸುತ್ತೇನೆ. ನೀನು ದೇವರ ಮಗನು ಮತ್ತು ನನ್ನ ಪಾಪಗಳಿಗಾಗಿ ಸತ್ತಿ ಎಂದು ನಾನು ನಂಬುತ್ತೇನೆ, ಉತ್ತಮವಾದ ರೀತಿಯಲ್ಲಿ ಈಗಲೇ ನಾನು ನಿನ್ನನ್ನು ನನ್ನ ಸ್ವಂತ ರಕ್ಷಕನನ್ನಾಗಿ ಸ್ವೀಕರಿಸುವೆನು."


# ನನ್ನ ನೆನಪಿನ ವಾಕ್ಯಗಳು



# ನಿಧಿಯ ಬೇಟೆ

ಕೆಳಗಿರುವ ಗುಪ್ತವಾದ ಸಂಕೇತಗಳಿಂದ ಶೋಧಿಸಿದ ನಿಧಿಯನ್ನು ಕಂಡುಹಿಡಿಯಿರಿ.





# ಪ್ರಶ್ನೆಯ ಪುಟ

## ಅನ್ವೇಷಕರು 1 – ಪಾಠ 1

**ಸೂಚನೆಗಳು: ಸರಿಯಾದ ಉತ್ತರವನ್ನು ಆರಿಸಿ – ಎ ಅಥವಾ ಬಿ. ನಿಮಗೆ ಪ್ರಶ್ನೆಯ ಕೆಳಕೊಟ್ಟ ಪೆಟ್ಟಿಗೆಯಲ್ಲಿ ಉತ್ತರಿಸಿ.**

**ಉದಾಹರಣೆ: ಪರಲೋಕವು ಒಂದು ಸ್ಥಳ ಅಲ್ಲಿ**

ಬಿ

ಎ. ಸ್ವಲ್ಪ ಪಾಪವಿದೆ.
ಬಿ. ಪಾಪವೇ ಇಲ್ಲ.

1. **ದೇವರು ಯಾವ ರೀತಿಯಾಗಿದ್ದಾನೆ?**

☐ ಎ. ದೇವರು ಪ್ರಪಂಚದಲ್ಲೆಲ್ಲಾ ಒಳ್ಳೇಯದಕ್ಕಾಗಿ ಶಕ್ತಿಯುತನಾಗಿದ್ದಾನೆ.
ಬಿ. ದೇವರು ಜೀವಸ್ವರೂಪನು, ಆತನು ನಿನ್ನನ್ನು ತಿಳಿದಿದ್ದಾನೆ ಮತ್ತು ಪ್ರೀತಿಸುತ್ತಾನೆ.

2. **ನಾವು ದೇವರನ್ನು ಕಾಣಲು ಸಾಧ್ಯವಿಲ್ಲ ಕಾರಣ**

☐ ಎ. ದೇವರು ಆತ್ಮಸ್ವರೂಪನು, ನಾವು ಆತ್ಮವನ್ನು ನೋಡಲು ಸಾಧ್ಯವಿಲ್ಲ.
ಬಿ. ದೇವರು ಬಹಳ ದೂರದಲ್ಲಿರುವುದರಿಂದ ಆತನನ್ನು ನಾವು ನೋಡಲು ಸಾಧ್ಯವಿಲ್ಲ.

3. **ದೇವರು ಪರಿಶುದ್ಧನು ಎಂದು ಸತ್ಯವೇದ ಹೇಳುವಾಗ, ಆದರ ಅರ್ಥವು**

☐ ಎ. ದೇವರು ತುಂಬಾ ಒಳ್ಳೆಯವನು.
ಬಿ. ದೇವರು ಪವಿತ್ರನು, ನಿರ್ದೋಷಿಯು ಮತ್ತು ಪಾಪವಿಲ್ಲದವನು.

4. **ದೇವರು ನನ್ನನ್ನು ಪ್ರೀತಿಸುತ್ತಾನೆಂದು ನನಗೆ ಗೊತ್ತಿದೆ ಯಾಕೆಂದರೆ**

☐ ಎ. ಆತನು ತನ್ನ ಮಗನನ್ನು ನನ್ನ ಪಾಪಗಳಿಗಾಗಿ ಸಾಯುವುದಕ್ಕಾಗಿ ಕೊಟ್ಟನು.
ಬಿ. ಆತನು ನನ್ನನ್ನು ಪ್ರೀತಿಸುತ್ತಾನೆಂದು ನಾನು ಬಲ್ಲೆನು.

5. **ದೇವರು ನನ್ನಿಂದ ಅತ್ಯಂತವಾಗಿ ಬಯಸುವುದೇನೆಂದರೆ**

☐ ಎ. ದೇವರಿಗೆ, ನಾನು ಆತನನ್ನು ಹೃದಯಪೂರ್ವಕವಾಗಿ ಪ್ರೀತಿಸಬೇಕು.
ಬಿ. ದೇವರಿಗೆ, ನಾನು ಬಹಳ ಒಳ್ಳೇ ಕಾರ್ಯಗಳನ್ನು ಮಾಡಬೇಕು.

ನಿಮಗೆ ಜ್ಞಾಪಕವಿರುವ
ವಾಕ್ಯವನ್ನು ಇಲ್ಲಿ ಬರೆಯಿರಿ:



ಇಲ್ಲಿ ನೀವು ಶೋಧಿಸಿದ
ನಿಧಿ! ಕುರಿತು ಬರೆಯಿರಿ:

ಹೆಸರು________ ಹುಟ್ಟಿದ ದಿನಾಂಕ________ ವಯಸ್ಸು______ ವರ್ಗ______

ಪಟ್ಟಣ________ ರಾಜ್ಯ________ ಸಂಖ್ಯೆ________

# ಯೇಸುವಿನೊಂದಿಗೆ ನನ್ನ ಪ್ರಯಾಣ

1 ಈ ಪಾಠದಿಂದ ನೀವು ಕಲಿತ ಬಹುಪ್ರಾಮುಖ್ಯವಾದ ಸಂಗತಿ ಯಾವುದು?

2 ಈ ಪಾಠದಲ್ಲಿ ನಿಮಗೆ ಅರ್ಥವಾಗದೆ ಇರುವ ಸಂಗತಿ ಯಾವುದಾದರು ಉಂಟೋ?

3 ಮಲ್ಲಿ ಯಾವುದಾದರು ವಿಶೇಷವಾದ ಅಗತ್ಯತೆ ಅಥವಾ ಪ್ರಾರ್ಥನಾ ಮನವಿಗಳು ಉಂಟೋ?

4 ಜರ್ನಲ್ ಅನ್ನು ಪ್ರಾರಂಭಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ. ನಿಮ್ಮ ಪ್ರಾರ್ಥನೆಗಳನ್ನು ಬರೆಯಿರಿ, ದೇವರಿಗೆ ಸ್ತುತಿ ಮತ್ತು ಕೃತಜ್ಞತೆ!

the Mailbox Club

Kannada